ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 112-117**
**©*IIMRD*, Mysuru**

IIMRD JOURNALS
**www.iimrd.com**

# ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು

**ಸಂತೋಷ ಎಸ್. ಎ[*] ; ಡಾ. ಎ. ರಾಮೇಗೌಡ[**]**

[*] ಸಂಶೋಧನಾ ವಿದ್ಯಾರ್ಥಿ; [**]ಪ್ರಾಧ್ಯಾಪಕರು

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

***ಸಾರಾಂಶ* (Abstract)**

*ವಿಶ್ವದ ಪ್ರಸ್ತುತ ವಿದ್ಯಮಾನವನ್ನು ಗಮನಿಸಿದಾಗ ವಿಜ್ಞಾನ ಮತ್ತು ತಂತ್ರಜ್ಞಾನ ಶೀಘ್ರಗತಿಯ ಬೆಳವಣಿಗೆಯನ್ನು ಕಾಣುತ್ತಿದೆ. ನಾವೀನ್ಯ ಅವಿಷ್ಕಾರ ಹಾಗೂ ಪ್ರಗತಿಯು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಈ ಹಿನ್ನೆಲೆಯಲ್ಲಿ ಭಾರತ ದೇಶವು ವಿಶ್ವದಲ್ಲಿ ಇಂಜಿನಿಯರ್‌ಗಳ ಅತ್ಯಂತ ದೊಡ್ಡ ಉತ್ಪಾದಕ ದೇಶವಾಗಿದೆ. ಭಾರತದಲ್ಲಿ ಇಂಜಿನಿಯರಿಂಗ್, ಪದವಿಪೂರ್ವ ಮತ್ತು ಪದವಿ ಶಿಕ್ಷಣ, ಇಂಜಿನಿಯರಿಂಗ್ ಮತ್ತು ಅನ್ವಯಿಕ ವಿಜ್ಞಾನದಲ್ಲಿ ಶಿಕ್ಷಣ ಕೊಡುವ ಹಲವಾರು ಇಂಜಿನಿಯರಿಂಗ್ ಕಾಲೇಜುಗಳಿವೆ. ರಾಷ್ಟ್ರ ಹಾಗೂ ರಾಜ್ಯದ ಶೈಕ್ಷಣಿಕ ನೀತಿಗಳಿಗನುಗುಣವಾಗಿ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಗಳು ಬದ್ಧವಾಗಿವೆ. ಪ್ರಸ್ತುತ ಲೇಖನದಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟೀಕೋನದಿಂದ ಅಧ್ಯಯನ ಮಾಡಲಾಗಿದೆ.*

***ಮುಖ್ಯಪದಗಳು* (Keywords):** ಆಸಕ್ತಿ, ತಾಂತ್ರಿಕ ಶಿಕ್ಷಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ವಿದ್ಯಾರ್ಥಿಗಳು.

## ಪೀಠಿಕೆ

ಯಾವುದೇ ಒಂದು ರಾಷ್ಟ್ರ, ಸಮುದಾಯ ಅಥವಾ ಸಮಾಜ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಆಚಾರ ವಿಚಾರ ಸಂಸ್ಕೃತಿಯನ್ನು ವರ್ಗಾಯಿಸುವಲ್ಲಿ ಶಿಕ್ಷಣವು ಪ್ರಮುಖವಾದ ಸಾಧನವಾಗಿದೆ. ಶಿಕ್ಷಣವು ವೈಜ್ಞಾನಿಕ ಚಿಂತನೆಗೆ ಒರೆ ಹಚ್ಚುವುದಲ್ಲದೆ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ, ಸಂಸ್ಕೃತಿಯ ಸಂರಕ್ಷಣೆಗೆ ಅತ್ಯವಶ್ಯಕವಾಗಿದೆ. ಹಾಗಾಗಿ ಶಿಕ್ಷಣ ಕೇವಲ ಜ್ಞಾನ ಸಂಪತ್ತಿನ ಕೇಂದ್ರವಾಗಿರದೆ ವ್ಯಕ್ತಿಗಳ ಭವಿಷ್ಯವನ್ನು ಎದುರಿಸಲು ಅಗತ್ಯವಾದ ಕಲೆ ಮತ್ತು ನೈಪುಣ್ಯತೆಯನ್ನು ಉತ್ತಮೀಕರಿಸುವ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ.

*Please cite this article as: ಸಂತೋಷ್ ಎಸ್.ಎ ಮತ್ತು ಎ. ರಾಮೇಗೌಡ. (2021).* ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 112–117*

ತಾಂತ್ರಿಕ ಶಿಕ್ಷಣ ಹಿನ್ನಲೆಯನ್ನ ನೋಡುವುದಾದರೆ ಇದು ಯಾವುದೇ ವ್ಯಾಪಾರ ಅಥವಾ ಉದ್ಯಮ ಅಥವಾ ಉದ್ಯೋಗದ ಅಭ್ಯಾಸವನ್ನು ಬೋಧಿಸುವುದಿಲ್ಲ. ಬದಲಿಗೆ ವೃತ್ತಿಪರ ಶಿಕ್ಷಣದ ಮಾನಸಿಕ ಕೌಶಲ್ಯಗಳಲ್ಲಿ ಕುಶಲತೆಯನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ವಿಜ್ಞಾನ ಮತ್ತು ಗಣಿತಶಾಸ್ತ್ರದ ಮೂಲಭೂತ ತತ್ವಗಳ ಅರ್ಥ ಮತ್ತು ಪ್ರಾಯೋಗಿಕ ಅನ್ವಯಕ್ಕೆ ಹೆಚ್ಚಿನ ಮಹತ್ವ ನೀಡುತ್ತದೆ. ಸ್ಯಾಮ್ಯುಯಲ್‌ಸನ್ (1890) ಮತ್ತು ಮಿಲಿಸ್ (1925) ರವರು 'ಉದ್ಯಮಕ್ಕೆ ಅನ್ವಯವಾಗುವ ಕಲೆ ಮತ್ತು ವಿಜ್ಞಾನದ ತತ್ವಗಳ ಬಗ್ಗೆ ತಾಂತ್ರಿಕ ಶಿಕ್ಷಣ ಸೂಚನೆಗಳನ್ನು ನೀಡಬೇಕು ಮತ್ತು ನಿರ್ದಿಷ್ಟ ಕೈಗಾರಿಕೆಗಳು ಮತ್ತು ಉದ್ಯೋಗಾವಕಾಶಕ್ಕೆ ಕಲೆ ಮತ್ತು ವಿಜ್ಞಾನದ ವಿಶೇಷ ಶಾಖೆಗಳನ್ನು ಅಳವಡಿಸಬೇಕು ಎಂದಿದ್ದಾರೆ. ಹಾಗಾಗಿ ಜ್ಞಾನವನ್ನು ಪಡೆಯುವ ಉದ್ದೇಶದಿಂದ ಪ್ರಾಯೋಗಿಕತೆಗೆ ಒಳಪಡುವ ಒಂದು ಔಪಚಾರಿಕ ಸನ್ನಿವೇಶಕ್ಕೆ ತಾಂತ್ರಿಕ ಶಿಕ್ಷಣ ಎನ್ನಲಾಗುತ್ತದೆ. ಬದಲಾಗುತ್ತಿರುವ ಕೈಗಾರಿಕಾ ನೀತಿ ಮತ್ತು ಸಮಾಜದ ಅವಶ್ಯಕತೆಗೆ ತಕ್ಕಂತೆ ಸ್ಪಂಧಿಸುವ ಮತ್ತು ಸಮರ್ಥ ತಂತ್ರಜ್ಞಾನವನ್ನು ತಾಂತ್ರಿಕ ಶಿಕ್ಷಣ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು**

ಭಾರತದಲ್ಲಿ ಹಲವಾರು ಸಮುದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಸೂಕ್ತ ಪ್ರಾತಿನಿಧ್ಯತೆ ಸಿಗದೆ ಅವಕಾಶ ವಂಚಿತರಾಗಿದ್ದಾರೆ. ಅಂತಹ ಸಮುದಾಯಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳು, ಇತರೆ ಹಿಂದುಳಿದ ಸಮುದಾಯಗಳು ಹಾಗೂ ಮಹಿಳೆಯರು ಪ್ರಮುಖರಾಗಿದ್ದಾರೆ. ಯಾವುದೇ ಸಮುದಾಯವಿರಲಿ ಮಹಿಳೆಯರನ್ನು ಹಿಂದಿನಿಂದಲೂ ದ್ವಿತೀಯ ದರ್ಜೆ ಪ್ರಜೆಗಳಂತೆ ಕಾಣಲಾಗುತ್ತಿದೆ. ಆದರೆ ಸ್ವಾತಂತ್ರ್ಯ ಬಂದ ನಂತರ ಸಂವಿಧಾನಾತ್ಮಕವಾಗಿ ಕಾನೂನುಗಳನ್ನು ರೂಪಿಸಿ ಮಹಿಳಾ ಸಬಲೀಕರಣಕ್ಕೆ ಅನುವು ಮಾಡಿಕೊಡಲಾಗಿದೆ. ಹಾಗಾಗಿ ಪ್ರಸ್ತುತ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ನಿಧಾನಗತಿಯಾಗಿ ಏರಿಕೆಯಾಗುತ್ತಿದೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಚುರಿಗೆ ಹಲವಾರು ಅಂಶಕಾಶಗಳು ಸಿಗುತ್ತಿದ್ದರು ಕೂಡ ಅವರ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆಯ ಪರಿಸ್ಥಿತಿಯಿಂದಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳ ನಿವಾರಣೆಗೆ ಸಮಾಜಶಾಸ್ತ್ರೀಯ ಅಧ್ಯಯನದ ಅಗತ್ಯವಿದ್ದು, ಪ್ರಸ್ತುತ ಅಧ್ಯಯನದಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಮಹಿಳಾ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಪರಿಶಿಷ್ಟ ಜಾತಿಯವರು ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದ ವರ್ಗವಾಗಿದೆ. ಮೇಲಾಗಿ ಎಲ್ಲಾ ಬಗೆಯ ಸಮಾನತೆ, ಸೌಲಭ್ಯ ಹಾಗೂ ಹಕ್ಕುಗಳಿಂದಲೂ ವಂಚಿತವಾದ ವರ್ಗವಾಗಿದೆ. ವಿವಿಧ ಜಾತಿಗಳನ್ನು ಗಣನೆಗೆ ತೆಗೆದುಕೊಂಡರೆ ಪರಿಶಿಷ್ಟ ಜಾತಿಯ ಜನಾಂಗದವರನ್ನು ಅಸ್ಪೃಶ್ಯ ಕೋಮುವಿಗೆ ಸೇರಿಸಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹೀನಾಯವಾದ ಸ್ಥಿತಿಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1930ರ ದಶಕದಲ್ಲಿ ಮರಾಠಿ ಪ್ರಾಬಲ್ಯವಿದ್ದ ಉತ್ತರ ಕರ್ನಾಟಕ ಭಾಗದಲ್ಲಿ 'ಪಂಚಮ'ರನ್ನು ಪರಿಶಿಷ್ಟ ಜಾತಿ ಎಂದು ಕರೆಯಲಾಗುತ್ತಿತ್ತು. ಜ್ಯೋತಿರಾವ್ ಪುಲೆ, ಅಂಬೇಡ್ಕರ್, ಪರಿಶಿಷ್ಟ ಜಾತಿ ಪ್ಯಾಂಥರ್ಸ್ ಎಂಬ ಸಂಘಟನೆಯ ಪ್ರಭಾವ ಕರ್ನಾಟಕದ ಪಂಚಮರ ಮೇಲೂ ಕೂಡ ಪ್ರಭಾವ ಬೀರಿತ್ತು.

ಗೈಲ್ ಓವರ್ ವೆಡ್ತ್‌ರವರ ಪ್ರಕಾರ ಎಲ್ಲಾ ಶೋಷಿತ ವರ್ಗದವರು ಅಂದರೆ ಕುಶಲಕರ್ಮಿಗಳು, ರೈತರು, ಮಧ್ಯಮ ಮತ್ತು ಕೆಳ ಜಾತಿಯವರೆಲ್ಲರೂ ಪರಿಶಿಷ್ಟ ಜಾತಿಯವರು ಎಂದು ಹೇಳಿದ್ದರೆ ಓಪಿನ್‌ರವರು ಧಾರ್ಮಿಕವಾಗಿ ಕೆಳ ಸ್ಥಾನ ಹೊಂದಿರುವ ಬಡತನದಿಂದ ಜೀವನ ಸಾಗಿಸುತ್ತಿರುವ ಮತ್ತು ಅಧಿಕಾರ ವಂಚಿತ ಸಮುದಾಯವನ್ನು ಪರಿಶಿಷ್ಟ ಜಾತಿಯವರು ಎಂದು ಕರೆದಿದ್ದಾರೆ.

**ಪರಿಶಿಷ್ಟ ಪಂಗಡದ ವ್ಯಾಖ್ಯೆಗಳು**

ಪರಿಶಿಷ್ಟ ಜಾತಿ ಸಮುದಾಯದವರಂತೆ ಬುಡಕಟ್ಟು ಸಮುದಾಯದವರು ಕೂಡ ಅಧಿಕಾರವಂಚಿತ ಶೋಷಿತ ಸಮುದಾಯವಾಗಿದೆ. ಬೊಗಾರ್ಡಸ್ ಎಂಬ ಮಾನವಶಾಸ್ತ್ರಜ್ಞ ರಕ್ಷಣೆಯ ಅವಶ್ಯಕತೆ, ರಕ್ತಸಂಬಂಧ, ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ಆದಿವಾಸಿ ಸಮೂಹವು ನಿಂತಿದೆ ಎಂದು ಹೇಳಿದ್ದಾರೆ. ಡಿ.ಎನ್. ಮುಜುಂದಾರ್ ಒಂದೇ ನಾಮಾಂಕಿತ ಹೊಂದಿರುವ, ಒಂದೇ ಭೂ ನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನಾಡುವ ಮತ್ತು ವಿವಾಹ ಉದ್ಯೋಗಗಳಿಗೆ ಸಂಬಂಧಿಸಿದಂತೆ ಒಂದೇ ಬಗೆಯ ವಿಧಿ ನಿಷೇಧಗಳಿಗೆ ಬದ್ಧವಾದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆದಿದ್ದಾರೆ. ಸಂವಿಧಾನದ 341 ನೇ ಕಲಂನಲ್ಲಿ ಈ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಎಂದು ಗುರುತಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ತಾಂತ್ರಿಕ ಶಿಕ್ಷಣದ ಮಹಿಳಾ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು.
- ತಾಂತ್ರಿಕ ಶಿಕ್ಷಣ ಪಡೆಯುವಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಆಸಕ್ತಿಯನ್ನು ತಿಳಿದುಕೊಳ್ಳುವ್ವದು.

**ಅಧ್ಯಯನದ ಪ್ರಾಮುಖ್ಯತೆ**

ತಾಂತ್ರಿಕ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಕೌಟುಂಬಿಕ ಸ್ಥಿತಿಯನ್ನು ಅರಿಯಲು, ಸಮಾಜದಲ್ಲಿ ಮಹಿಳೆ ಸ್ವಾವಲಂಬಿ ಬದುಕು ಸಾಗಿಸುವುದನ್ನು ತಿಳಿಯಲು ಮತ್ತು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಕೋನದಿಂದ ಪ್ರಸ್ತುತ ಅಧ್ಯಯನ ಮಹತ್ವಪೂರ್ಣವಾದುದಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಕ್ಷೇತ್ರವನ್ನು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯೂ ಒಂದಾಗಿದೆ. 2011ರ ಜನಗಣತಿಯ ಪ್ರಕಾರ ರಾಜ್ಯದ 14ನೇ ದೊಡ್ಡ ಜಿಲ್ಲೆಯಾಗಿದೆ. ಇದರ ಒಟ್ಟು ವಿಸ್ತೀರ್ಣ 6,814 ಚ.ಕಿ.ಮೀ. ಹೊಂದಿದೆ. ಹಾಸನವು 8 ತಾಲ್ಲೂಕುಗಳನ್ನು, 38 ಹೋಬಳಿಗಳನ್ನು ಮತ್ತು 2360 ಹಳ್ಳಿಗಳಿಂದ ಕೂಡಿದೆ. 2011ರ ಜನಗಣತಿಯ ಪ್ರಕಾರ ಹಾಸನ ಜಿಲ್ಲೆಯ ಒಟ್ಟು ಜನಸಂಖ್ಯೆ 17,76,221 ಪುರುಷರ ಸಂಖ್ಯೆ 8,85,807 ಮತ್ತು ಮಹಿಳೆಯರ ಸಂಖ್ಯೆ 8,90,141ರಷ್ಟಿದೆ. ಜಿಲ್ಲೆಯ ಲಿಂಗಾನುಪಾತ 1000 ಪುರುಷರಿಗೆ

1005 ಮಹಿಳೆಯರನ್ನು ಹೊಂದಿದೆ. ಹಾಸನ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ 75.89ರಷ್ಟಿರುವುದು ಕಂಡುಬರುತ್ತದೆ.

**ಮಾದರಿ ವಿಧಾನ**

ಹಾಸನ ಜಿಲ್ಲೆಯಲ್ಲಿ ಒಟ್ಟು 05 ತಾಂತ್ರಿಕ ಮಹಾವಿದ್ಯಾಲಯಗಳಿದ್ದು, 01 ಸರ್ಕಾರಿ ಮತ್ತು 04 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಒಳಗೊಂಡಿದೆ. ಇಲ್ಲಿ 2016–17ನೇ ಸಾಲಿನಲ್ಲಿ ಒಟ್ಟು 2243 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇವರಲ್ಲಿ 1343 ಪುರುಷ ಮತ್ತು 900 ಮಹಿಳಾ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಮತ್ತು ಪಂಗಡಗಳ ಮಹಿಳಾ ವಿದ್ಯಾರ್ಥಿಗಳ ಕ್ರಮವಾಗಿ 378 ಹಾಗೂ ಪರಿಶಿಷ್ಟ ಪಂಗಡದ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ 160. ಇವರಲ್ಲಿ ಪ್ರಸ್ತುತ ಸಂಶೋಧನೆಗೆ ಪರಿಶಿಷ್ಟ ಜಾತಿಯ 30 ಮಹಿಳಾ ವಿದ್ಯಾರ್ಥಿಗಳು ಮತ್ತು ಪರಿಶಿಷ್ಟ ಪಂಗಡದ 20 ಮಹಿಳಾ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 50 ಮಹಿಳಾ ವಿದ್ಯಾರ್ಥಿಗಳನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

**ಮಾಹಿತಿ ವಿಶ್ಲೇಷಣೆ**

**ಕೋಷ್ಟಕ 1: ಸೂಚನಾದಾರರು ಸಾಮಾನ್ಯ ಮತ್ತು ವೈಯಕ್ತಿಕ ವಿವರ**

| ವಿವರಗಳು | ವಿವರಗಳು | ಆವೃತ್ತಿ (n=50) | ಶೇಕಡವಾರು |
|---|---|---|---|
| ಜಾತಿ/ಸಮುದಾಯ | ಪರಿಶಿಷ್ಟ ಜಾತಿ | 30 | 60.0 |
| | ಪರಿಶಿಷ್ಟ ಪಂಗಡ | 20 | 40.0 |
| ಪೋಷಕರ ವಿದ್ಯಾರ್ಹತೆ | ಅನಕ್ಷರಸ್ಥರು | 02 | 4.0 |
| | ಪ್ರಾಥಮಿಕ | 18 | 36.0 |
| | ಪ್ರೌಢ | 22 | 44.0 |
| | ಪದವಿ ಪೂರ್ವ | 06 | 12.0 |
| | ಪದವಿ | 02 | 4.0 |
| ಆದಾಯ | < 30, 000 | 22 | 44.0 |
| | 30,000–60,000 | 14 | 28.0 |
| | 60,000–90,000 | 08 | 16.0 |
| | 90,000–1,20,000 | 02 | 4.0 |
| | 1,20,000–1,50,000 | 02 | 4.0 |
| | >1,50,000 | 02 | 4.0 |
| ಪೋಷಕರ ವೃತ್ತಿ | ಸರ್ಕಾರಿ | 02 | 4.0 |
| | ಖಾಸಗಿ | 12 | 24.0 |
| | ಕೃಷಿ | 20 | 40.0 |
| | ಕೂಲಿ | 08 | 16.0 |
| | ವ್ಯಾಪರ | 08 | 16.0 |

| | | | |
|---|---|---|---|
| ಮನೆಯ ವಿಧ | ಸ್ವಂತ | 34 | 68.0 |
| | ಬಾಡಿಗೆ | 16 | 32.0 |
| ಪ್ರದೇಶ | ಗ್ರಾಮೀಣ | 36 | 72.0 |
| | ನಗರ | 14 | 28.0 |
| ಸೂಚನದಾರರ ವಯಸ್ಸು | 20–21 | 26 | 52.0 |
| | 21–22 | 12 | 24.0 |
| | 22–23 | 12 | 24.0 |
| ತಾಂತ್ರಿಕ ಶಿಕ್ಷಣದಲ್ಲಿ ಆಸಕ್ತಿಯ ವಿವರ | ಹೌದು | 14 | 28.0 |
| | ಇಲ್ಲ | 36 | 72.0 |

ಮೂಲ: ಕ್ಷೇತ್ರಕಾರ್ಯ

**ಸಂಶೋಧನೆಯಲ್ಲಿ ಕಂಡು ಬಂದ ಅಂಶಗಳು**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಹುತೇಕ ವಿದ್ಯಾರ್ಥಿನಿಯರು ಆರ್ಥಿಕವಾಗಿ ಹಿಂದುಳಿದಿದ್ದಾರೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೇ. 20 ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶೈಕ್ಷಣಿಕ ಸಾಲದ ಮೂಲಕ ತಾಂತ್ರಿಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ.
- ಭವಿಷ್ಯದಲ್ಲಿ ಉದ್ಯೋಗದ ಭರವಸೆ ಇಲ್ಲದೆ ಇರುವ ಕಾರಣ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದ ಮೇಲೆ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ.
- ಶೇಕಡ 18 ರಷ್ಟು ವಿದ್ಯಾರ್ಥಿಗಳು ಪೋಷಕರ ಒತ್ತಾಯದಿಂದ ತಾಂತ್ರಿಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ.
- ಶೇಕಡ 40 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಹಿನ್ನಲೆಯುಳ್ಳವರಾಗಿದ್ದಾರೆ.

**ಸಲಹೆಗಳು**

- ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರೆಯುವ ಶೈಕ್ಷಣಿಕ ಸೌಲಭ್ಯಗಳ ಕುರಿತು ಹೆಚ್ಚಿನ ಅರಿವು ಮೂಡಿಸುವುದು.
- ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸಲು ತಾಂತ್ರಿಕ ಶಿಕ್ಷಣದಲ್ಲಿ ವೃತ್ತಿಪರ ಕೌಶಲ್ಯವನ್ನು ಹೆಚ್ಚಿಸುವುದು.
- ತಾಂತ್ರಿಕ ಶಿಕ್ಷಣ ಪಡೆದಿರುವ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶ ಕಲ್ಪಿಸಬೇಕು.

**ಉಪಸಂಹಾರ**

ಸರ್ಕಾರವು ಪರಿಶಿಷ್ಟ ಸಮುದಾಯಗಳ ಶೈಕ್ಷಣಿಕ ಪ್ರಗತಿಗಾಗಿ ಹಲವರು ಉಪಯುಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಂವಿಧಾನದಲ್ಲಿನ 46ನೇ ಕಲಂನ ಪ್ರಕಾರ ಅವರ ಶೈಕ್ಷಣಿಕ ಆಸಕ್ತಿಗಳನ್ನು ಪೂರೈಸಲು ನಿರ್ದೇಶನವಿದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ, ಪಾಠ ಶುಲ್ಕ ಮತ್ತು ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ ಅಲ್ಲದೆ ವಿದ್ಯಾರ್ಥಿವೇತನ ಉನ್ನತ ಶಿಕ್ಷಣಕ್ಕಾಗಿ

ವಿದೇಶಗಳಿಗೆ ಹೋಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಸಹಾಯಧನ ಮೊದಲಾದವುಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಪರಿಶಿಷ್ಟ ಜಾತಿಯವರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಾಗಿದುವುದರಿಂದ ಇತರೆ ಮೇಲ್ಜಾತಿಯವರಂತೆ ಬದುಕಬೇಕಾದರೆ ವಿವಿಧ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಪ್ರಸ್ತುತ ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಸ್ತ್ರ, ವಸತಿ, ಊಟ, ಪುಸ್ತಕ, ಶಿಷ್ಯವೇತನ, ಹಾಗೂ ಉದ್ಯೋಗ ಮೀಸಲಾತಿಗಳನ್ನು ನೀಡುತ್ತಿದೆ. ಆದರೂ ನಿರೀಕ್ಷಿತ ಪ್ರಮಾಣದಲ್ಲಿ ಪರಿಶಿಷ್ಟ ಸಮುದಾಯದವರು ಶೈಕ್ಷಣಿಕ ಅಭಿವೃದ್ಧಿಯಾಗಿಲ್ಲ. ಆದರೂ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಪರಿಸ್ಥಿತಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಸಮುದಾಯದ ಶೈಕ್ಷಣಿಕ ಮಟ್ಟ ಸುಧಾರಿಸಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಗುರುಲಿಂಗಯ್ಯ ಎಂ. (2016). ಅಂಚಿನ ಗುಂಪುಗಳ ಸಮಾಜಶಾಸ್ತ್ರ. ದೇವಿತಾ ಪ್ರಕಾಶನ, ತುಮಕೂರು.
- Bhagwan Dayal. (1995). The Development of Modern Indian Education", Orient Longman's Ltd., Bomaby.
- Gore M S. (1995). Indian Education: Structure and Process. Rawat Publications, New Delhi.
- Tinu Joseph (2013). Indian Women Higher Education and their Job Aspirations.